ಮಾಯಿಲ ಗುಮ್ಮಕೆರೆಯ ದಡದಲ್ಲಿದ್ದ ನಾಣೆಲ ಮರದಡಿ ಕುಳಿತು ಅದೇನೋ ದೀರ್ಘವಾಗಿ ಯೋಚಿಸುತ್ತಿದ್ದ. ಕೆರೆಯ ಸ್ವಚ್ಛ ನೀರೊಳಗೆ ಆಗೊಮ್ಮೆ ಈಗೊಮ್ಮೆ ಸಂಚಾರ ಹೊರಟು ಮುಗುಳಿ ಎಬ್ಬಿಸಿ, ವರ್ತುಲ ಹರಡುತ್ತಿದ್ದ ಮಡೆಂಜಿ, ಮುಗುಡು, ಅಬ್ರೋಣಿ ಮೀನುಗಳು ಮಾತ್ರ ಆತನ ಯೋಚನೆಯನ್ನು ದಾರಿ ತಪ್ಪಿಸಲು ಹೆಣಗಾಡುತ್ತಿದ್ದವು, ಯಶಸ್ವಿಯಾಗುತ್ತಿದ್ದವು. ಅವು ಕೆಸರೊಳಗೆ ಕಂತಿದ ಮೇಲೆ ಮತ್ತೆ ಮಾಯಿಲ ಮರಳಿ ತನ್ನ ಯೋಚನೆಯಲ್ಲಿ ಮುಳುಗುತ್ತಿದ್ದ.

ಸುಗ್ಗಿ ತಿಂಗಳು ಕಳೆದು ಆಗಲೇ ಪಗ್ಗು ಕಾಲಿಟ್ಟಾಗಿತ್ತು. ಮಾಯಿಲನ ಮನೆಯಲ್ಲಿ ಕಲ್ಲುರ್ಟಿ ಭೂತಕ್ಕೆ ಕೋಲ ನಡೆಯಬೇಕಾದ ಕಾಲವದು. ಕೊಳಕೆಯ ಕೊಯ್ಲು ಇನ್ನೂ ಮುಗಿದಿಲ್ಲ; ಬಾಕಿಮಾರು ಗದ್ದೆಯ ಕೊಳಕೆ ಧಾನ್ಯಗಳನ್ನ ಇನ್ನೂ ಹರಿದಿಲ್ಲ. ಒಂದಲ್ಲ ಎರಡಲ್ಲ ಹಲವು ಕೆಲಸಗಳು ಇನ್ನೂ ಬಾಕಿ ಬಿದ್ದಿವೆ. ಅದೇ ಚಿಂತೆ. ಯೋಚನೆಯಲ್ಲಿ ಮಾಯಿಲ ಸುಸ್ತಾಗಿ ಮಾಣೆಲ ಮರದಡಿ ಕುಳಿತು ಆಗಾಗ್ಗೆ ನಿಟ್ಟುಸಿರು ಬಿಡುತ್ತಿದ್ದ.

ಪಗ್ಗುವಲ್ಲಿ ಇಪ್ಪತ್ತೈದು ಹೋಗುವುದರೊಳಗೆ ಕೋಲಕ್ಕೆ ದಿನ ಇಡಲೇಬೇಕಾಗಿತ್ತು. ಇಲ್ಲದಿದ್ದಲ್ಲಿ ಭೇಷ ತಿಂಗಳು ಬಂತೆಂದರೆ ಮತ್ತೆ ಮುಂಗಾರು ಮಳೆ ಮುತ್ತಿಕ್ಕಲಾರಂಭಿಸುತ್ತವೆ ಎಂಬ ಭಯ ಮಾಯಿಲನ ಎದೆಹಿಂಡಿ ಹೆದರಿಸುತ್ತಿತ್ತು. ಆದಷ್ಟು ಬೇಗ ಕೊಯ್ಲು ಮುಗಿಸಿ ಬಿಡುವ ಆತುರ ಮಾಯಿಲನಲ್ಲಿ. ಆದರೆ ಆತನೊಬ್ಬನೇ ಎಷ್ಟೆಂದು ಒದ್ದಾಡಬಲ್ಲ. ಆತನಿಗೂ ಎಂಬತ್ತರ ಇಳಿವಯಸ್ಸು. ಊರಲ್ಲಿರುವ ಕಿರಿಯ ಮಗ ಕೃಷ್ಣಪ್ಪ ಅಪ್ಪನ ಕಷ್ಟ ಸುಖಕ್ಕೆ ಸಕಾಲದಲ್ಲಿ ಸಿಗುವವನಲ್ಲ.

ಯೋಚನೆಯೊಳಗಿದ್ದ ಮಾಯಿಲನನ್ನು ಇದೀಗ ಹೊರ ಎಳೆದದ್ದು ತಿಳಿನೀರ ಮೇಲೆ ಈಜುತ್ತಿದ್ದ ಕೊಡ್ಯಾಣ ತರು, ಕೈಪೆ ತರುಗಳ ತೆಪ್ಪ. ಆ ಮೀನ ತೆಪ್ಪಗಳ ಮಧ್ಯೆ ಈಜುತ್ತಿದ್ದ ಇಂದ್ರಾಲೆ, ಬಾಲೆ, ಅಲಂಕ್, ಕಿಜಾನ್ ಮೀನುಗಳು ಮಾಯಿಲನ ಯೋಜನೆಯನ್ನು ಕ್ಷಣಕಾಲ ಹಿಡಿದಿಟ್ಟವು. ಕೆರೆ ತುಂಬಾ ಈಜುವ ಮೀನುಗಳನ್ನು ಕಂಡೊಡನೆ ಮಾಯಿಲನ ಮನಸ್ಸು ಲೆಕ್ಕ ಹಾಕಿದ್ದು ಕೆರೆಯ ಕೆಸರು ತೆಗೆಯುವ ಕಾರ್ಯಕ್ರಮವನ್ನ. ಕೆಸರು ತೆಗೆಯಬಂದ ನೆರೆಕೆರೆಯವರಿಗೆಲ್ಲಾ ಸರಿಸಮಾನವಾಗಿ ಮೀನು ಹಂಚುವುದೇ ಮಾಯಿಲನಿಗೆ ಪ್ರತೀ ವರ್ಷವೂ ತಲೆನೋವಿನ ಸಂಗತಿ. ಅದಕ್ಕೇ ಗುಮ್ಮಕೆರೆಯ ಕೆಸರು ತೆಗೆಸುವುದೇ ಅವನಿಗೆ ಬೇಜಾರಿನ ಸಂಗತಿ. ವರ್ಷಕ್ಕೊಮ್ಮೆ ತೆಗೆಯುವ ಗುಮ್ಮನಕೆರೆಯ ಕೆಸರು, ವರ್ಷಕ್ಕೊಮ್ಮೆ ನಡೆಯುವ ಕಲ್ಲುರ್ಟಿಯ ಕೋಲ– ಇದು ಅನೇಕ ತಲೆಮಾರುಗಳಿಂದ ಮಾಯಿಲನ ಮನೆತನದಲ್ಲಿ ನಡೆದುಕೊಂಡು ಬಂದಂತಹ ರೂಢಿ, ಆಚಾರ.

ಸೂರ್ಯ ಸರಿಯಾಗಿ ನಡುನೆತ್ತಿಗೇ ಬಂದಿದ್ದ. ಮೈಯೆಲ್ಲಾ ಬೊಕ್ಕೆ ಎಬ್ಬಿಸುವಂತಹ ಉರಿಬಿಸಿಲು. ಮಾಯಿಲ ಹೆಗಲ ಮೇಲಿದ್ದ ಕೆಂಪು ಗೆರೆಯ ನೀಲಿ ಬೈರಾಸಿನಿಂದ ಬೀಸಿ ಬೀಸಿ ಗಾಳಿ ಹಾಕಿಕೊಳ್ಳುತ್ತಿದ್ದ ಆತ ನಾಣೆಲ ಮರದಡಿ ಕೂತಿದ್ದರೂ ಒಂದೆಲೆ ಅಲುಗಿಸಲಾರೆ ಎನ್ನುವಂತಹ ಬಿಗುಮಾನ... ಆ ಮರಕ್ಕೂ.

ಕೆರೆಯ ತಿಳಿನೀರನ್ನೇ ದಿಟ್ಟಿಸುತ್ತಿದ್ದ ಮಾಯಿಲನ ಮನಸ್ಸಿಡೀ ಪತ್ರನಜೆಯ ಭಯ ಮತ್ತೆ ಆರಂಭವಾದಾಗ ಕುಳಿತಲ್ಲಿಂದ ಎದ್ದು ತನ್ನ ಬಾಕಿಮಾರು ಗದ್ದೆಯತ್ತ ಆ ಬಿರುಬಿಸಿಲಲ್ಲೇ ಹೆಜ್ಜೆ ಹಾಕತೊಡಗಿದ.

ಪಗ್ಗು ತಿಂಗಳು ಆರಂಭವಾಗಿ ಆಗಲೇ ಮೂರುದಿನ. ಇನ್ನು ಏಳು ದಿನ ಕಳೆದರೆ ಪತ್ರನಜೆ. ಪತ್ರನಜೆಯ ನಂತರ ಮುಂಗಾರ ಮಳೆಯ ಆರ್ಭಟದ ಭಯ ಎಲ್ಲರಿಗೂ ಇದ್ದೇ ಇದೆ. ಈ ಬಾರಿ ಕೊಳಕೆಯ ಬಿತ್ತನೆಯೇ ತೀರಾ ತಡವಾದುದೇ ಕೊಯ್ಲಿನ ಬಾಕಿಗೂ ಕಾರಣ.

ಮಾಯಿಲ ಬಾಕಿಮಾರು ಗದ್ದೆಯ ಹುಣೆದಾಡಿ ಬೈಲಾರೆಯ ಗದ್ದೆ ಕಡೆ ಬಂದಾಗ, ಮಗ ಕೃಷ್ಣಪ್ಪ